ಖಾಲಿಯಿರುವ ಬೋಧಕ ವೃಂದದ ಹುದ್ದೆಗಳಿಗೆದುರಾಗಿ ಅರೆಕಾಲಿಕ ಉಪನ್ಯಾಸಕರುಗಳನ್ನು ಹಾಗೂ ಬೋಧಕೇತರ ವೃಂದದ (ಗ್ರೂಪ್-ಡಿ) ಹುದ್ದೆಗಳಿಗೆದುರಾಗಿ ಅಕುಶಲದಾಳುಗಳನ್ನು ನೇಮಿಸಿಕೊಳ್ಳಲಾಗಿರುವುದರಿಂದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗಿರುವುದಿಲ್ಲ.

ಇ) ಈ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು (ವಿವರ ನೀಡುವುದು)?

ಖಾಲಿಯಿರುವ ಬೋಧಕ ಹಾಗೂ ಬೋಧಕೇತರ ವೃಂದದಲ್ಲಿನ ಮೆಕ್ಯಾನಿಕ್, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಕರ್ನಾಟಕ ಲೋಕ ಸೇವಾ ಆಯೋಗವು ಅಧಿಸೂಚನೆ ಹೊರಡಿಸಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(333)291**
ಸದಸ್ಯರ ಹೆಸರು	:	**ಡಾ: ಸುಧಾಕರ್ ಎಂ.ಸಿ**
ಉತ್ತರಿಸುವ ಸಚಿವರು	:	**(ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**

ಅ) ಚಿಂತಾಮಣಿ ತಾಲ್ಲೂಕಿನ ಬಾಲಕರ ಹಾಗೂ ಬಾಲಕಿಯರ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕರು ಹಾಗೂ ಬೋಧಕೇತರರ ಸಂಖ್ಯೆ ಎಷ್ಟು;(ಹುದ್ದೆವಾರು, ಕಾಲೇಜು ವಾರು ವಿವರ ನೀಡುವುದು);

ಬೋಧಕರು–45

ಬೋಧಕೇತರರು–03

ಒಟ್ಟು–48

ಹುದ್ದೆವಾರು ಕಾಲೇಜುವಾರು ವಿವರ ಲಗತ್ತಿಸಿದೆ.

ಆ) ಹಾಗಿದ್ದಲ್ಲಿ, ಹುದ್ದೆ ಖಾಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಲು ತೊಂದರೆಯಾಗುತ್ತಿರುವುದು ನಿಜವಲ್ಲವೆ;

ಇಲ್ಲ.

ಉಪನ್ಯಾಸಕರ ಕೊರತೆ ಇರುವ ಪದವಿ ಪೂರ್ವ ಕಾಲೇಜುಗಳಿಗೆ ಕಡಿಮೆ ಕಾರ್ಯಭಾರ ಹೊಂದಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಂದ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ನಿಯೋಜಿಸಲು ಜಿಲ್ಲಾ ಉಪ ನಿರ್ದೇಶಕರು ಕ್ರಮ ಕೈಗೊಂಡಿದ್ದು, ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗಿರುವುದಿಲ್ಲ.

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

- 2450 ಉಪನ್ಯಾಸಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಕರ್ನಾಟಕ ಲೋಕ ಸೇವಾ ಆಯೋಗವನ್ನು ದಿನಾಂಕ:02/04/2008ರಂದು ಅಧಿಸೂಚನೆ ಹೊರಡಿಸಿ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.
- 1246 ಉಪನ್ಯಾಸಕರ ಹುದ್ದೆಗಳಿಗೆ ಸ್ನಾತಕೋತ್ತರ ಪದವಿ ಪಡೆದ ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಬಡ್ತಿ ಮೂಲಕ ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು (ವಿವರ ನೀಡುವುದು)?

- 2450 ಉಪನ್ಯಾಸಕರ ಹುದ್ದೆಗಳಿಗೆ ಕರ್ನಾಟಕ ಲೋಕ ಸೇವಾ ಆಯೋಗದಿಂದ ಅಂತಿಮ ಆಯ್ಕೆ ಪಟ್ಟಿ ಬಂದ ನಂತರ ಕೌನ್ಸಲಿಂಗ್ ಮೂಲಕ ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ 1246 ಉಪನ್ಯಾಸಕರ ಹುದ್ದೆಗಳಿಗೆ ಬಡ್ತಿ ನೀಡುವ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೌನ್ಸಲಿಂಗ್ ಮೂಲಕ ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.
- ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ 100 ದ್ವಿ.ದ.ಸ.ಮತ್ತು 58 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಿಗೆ ಕರ್ನಾಟಕ ಲೋಕ ಸೇವಾ ಆಯೋಗವು ಅಧಿಸೂಚನೆ ಹೊರಡಿಸಿ, ಪರೀಕ್ಷೆಗಳನ್ನು ನಡೆಸಿ, ಆಯ್ಕೆ ಪ್ರಕ್ರಿಯೆ ನಡೆಸುತ್ತಿದೆ. ಕರ್ನಾಟಕ ಲೋಕ ಸೇವಾ ಆಯೋಗದಿಂದ ಅಂತಿಮ ಆಯ್ಕೆ ಪಟ್ಟಿಯನ್ನು ಪಡೆದ ನಂತರ ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಅನುಬಂಧ

ಚಿಂತಾಮಣಿ ತಾಲ್ಲೂಕಿನಲ್ಲಿರುವ ಬಾಲಕರ ಮತ್ತು ಬಾಲಕಿಯರ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕರ ಹಾಗೂ ಬೋಧಕೇತರ ಸಂಖ್ಯೆ, ವಿಷಯವಾರು ಕಾಲೇಜುವಾರು ವಿವರ:-

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಖಾಲಿ ಇರುವ ಬೋಧಕರ ಹುದ್ದೆ ಸಂಖ್ಯೆ ವಿಷಯವಾರು	ಖಾಲಿ ಇರುವ ಬೋಧಕೇತರ ಹುದ್ದೆ	ಒಟ್ಟು
1.	ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಚಿಂತಾಮಣಿ	1. ಕನ್ನಡ –04 2. ಇಂಗ್ಲೀಷ್ –03 3. ಇತಿಹಾಸ –03 4. ರಾಜ್ಯಶಾಸ್ತ್ರ –01 5. ಅರ್ಥಶಾಸ್ತ್ರ –03 6. ಸಮಾಜಶಾಸ್ತ್ರ –02	–	16
2.	ಬಾಲಕಿಯರ	1. ಕನ್ನಡ –01	1.ಪ್ರ.ದ.ಸ.–01	07+1=08

	ಸರ್ಕಾರಿ ಪದವಿ ಪೂರ್ವ ಕಾಲೇಜು, ಚಿಂತಾಮಣಿ	2. ಇಂಗ್ಲೀಷ್ –02 3. ಇತಿಹಾಸ –01 4. ಸಮಾಜಶಾಸ್ತ್ರ –02 5. ಉರ್ದು –01		
3.	ಸರ್ಕಾರಿ ಪದವಿ ಪೂರ್ವ ಕಾಲೇಜು, ತಳಗವಾರ, ಚಿಂತಾಮಣಿ ತಾ:	1. ಕನ್ನಡ –01 2. ಇತಿಹಾಸ –01 3. ರಾಜ್ಯಶಾಸ್ತ್ರ –01 4. ಸಮಾಜಶಾಸ್ತ್ರ –01 5. ವಾಣಿಜ್ಯಶಾಸ್ತ್ರ –01	–	05
4.	ಸರ್ಕಾರಿ ಪದವಿ ಪೂರ್ವ ಕಾಲೇಜು, ಕೈವಾರ, ಚಿಂತಾಮಣಿ ತಾ:	1. ಕನ್ನಡ –01 2. ಇಂಗ್ಲೀಷ್ –01 3. ಇತಿಹಾಸ –01 4. ರಾಜ್ಯಶಾಸ್ತ್ರ –01 5. ಸಮಾಜಶಾಸ್ತ್ರ –01 6. ಅರ್ಥಶಾಸ್ತ್ರ –01	–	06
5.	ಸರ್ಕಾರಿ ಪದವಿ ಪೂರ್ವ ಕಾಲೇಜು, ಬಟ್ಲಹಳ್ಳಿ, ಚಿಂತಾಮಣಿ ತಾ:	1. ಕನ್ನಡ –01 2. ಇಂಗ್ಲೀಷ್ –01 3. ರಾಜ್ಯಶಾಸ್ತ್ರ –01 4. ಸಮಾಜಶಾಸ್ತ್ರ –01	–	04
6.	ಸರ್ಕಾರಿ ಪದವಿ ಪೂರ್ವ ಕಾಲೇಜು, ಮೈಲಾಂಡ್ಲಹಳ್ಳಿ, ಚಿಂತಾಮಣಿ ತಾ:	1. ಕನ್ನಡ –01 2. ಇಂಗ್ಲೀಷ್ –01 3. ಇತಿಹಾಸ –01 4. ಅರ್ಥಶಾಸ್ತ್ರ –01 5. ರಾಜ್ಯಶಾಸ್ತ್ರ –01 6. ಸಮಾಜಶಾಸ್ತ್ರ –01 7. ವಾಣಿಜ್ಯಶಾಸ್ತ್ರ –01	1.ಪ್ರ.ದ.ಸ.–01 2.ಗ್ರೂಪ್–ಡಿ–01	07+02=09
	ಒಟ್ಟು	**45**	**03**	**45+3=48**

ಚಿಂತಾಮಣಿ ತಾಲ್ಲೂಕಿನಲ್ಲಿ ಅನುದಾನಿತ ಪದವಿ ಪೂರ್ವ ಕಾಲೇಜುಗಳು ಯಾವುದೂ ಇರುವುದಿಲ್ಲ.

ಸಂಖ್ಯೆ: ಇಡಿ 108 ಡಿಎಆರ್ 2008

(ಎಂ.ಎಂ.ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ(ಸೇವೆಗಳು–1,2)